# ಶ್ರೀರಾಮಕೃಷ್ಣರ ಮೌನಕ್ರಾಂತಿ

"ಇಂದಿನ ಕ್ಲಾಂತ ಜಗತ್ತಿಗೆ ಶ್ರೀರಾಮಕೃಷ್ಣ ಮತ್ತು ಸ್ವಾಮಿ ವಿವೇಕಾನಂದರ ಸಂದೇಶವು ಶಾಂತಿಯನ್ನೂ ಸಾಮರಸ್ಯವನ್ನೂ ತಿಳಿವಳಿಕೆಯನ್ನೂ ನೀಡಬಲ್ಲುದು ಎಂದು ನಾವು ನಂಬುತ್ತೇವೆ. ಅವರು ಕೇವಲ ಧಾರ್ಮಿಕ ಮುಂದಾಳುಗಳಲ್ಲ, ಅವರು ಆ ಪರಿಧಿಯನ್ನೂ ಮೀರಿಹೋಗಿದ್ದರು. ಅವರು ಶಾಂತಿ, ಸಮನ್ವಯ ಮತ್ತು ಭ್ರಾತೃತ್ವಗಳ ಪ್ರವಾದಿಗಳು. ಅವರ ಸಂದೇಶ ಹಿಂದೆ ಭಾರತಕ್ಕೂ ಇಡೀ ಜಗತ್ತಿಗೂ ಪ್ರಸ್ತುತವಾಗಿತ್ತು. ಆದರೆ ಈಗಿನ ಜಾಗತಿಕ ಸನ್ನಿವೇಶಗಳಲ್ಲಿ ಅದು ಇನ್ನೂ ಹೆಚ್ಚು ಪ್ರಸ್ತುತ ಎನಿಸುತ್ತದೆ. ಆದ್ದರಿಂದಲೇ ಸೋವಿಯತ್ ದೇಶದ ಅನೇಕ ವಿದ್ವಾಂಸರು ಮತ್ತು ಚಿಂತಕರು ಶ್ರೀರಾಮಕೃಷ್ಣರ, ವಿಶೇಷವಾಗಿ ಸ್ವಾಮಿ ವಿವೇಕಾನಂದರ ಅಧ್ಯಯನದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವರು." ಇದು ಚೆಲಿಸೆವಾ (Cheleseva) ಎಂಬ ರಷ್ಯನ್ ಚಿಂತಕರು ಸ್ವಾಮಿ ಲೋಕೇಶ್ವರಾನಂದರಿಗೆ ಬರೆದ ಒಂದು ಪತ್ರದ ಭಾಗ. ಇದನ್ನು ಬರೆದಾಗ ರಷ್ಯಾ ಇನ್ನೂ ಕಮ್ಯೂನಿಸ್ಟ್ ಆಳ್ವಿಕೆಯಲ್ಲೇ ಇತ್ತು. ದೇವರನ್ನು ಒಪ್ಪದ ದೇಶದವರು, ದೇವರನ್ನು ಬಿಟ್ಟು ಇನ್ನೇನನ್ನೂ ಮಾತನಾಡದ ಶ್ರೀರಾಮಕೃಷ್ಣರನ್ನು ಒಪ್ಪಿಕೊಳ್ಳುತ್ತಿರುವುದು ಆಶ್ಚರ್ಯವಲ್ಲವೆ? ಸೋವಿಯತ್ ರಷ್ಯದ ಹಿಂದಿನ ಅಧ್ಯಕ್ಷರಾಗಿದ್ದ ಬ್ರೆಜ್ನೇವ್ ಆ ದೇಶದಲ್ಲಿ The Gospel of Sri Ramakrishna (ಶ್ರೀರಾಮಕೃಷ್ಣ ವಚನವೇದ) ಪುಸ್ತಕದ ಪ್ರಕಟನೆಗೆ ಅನುಮತಿ ನೀಡಿದ್ದರು. ಆದರೆ ಅದರಲ್ಲಿ ಎಲ್ಲೆಲ್ಲಿ ದೇವರ ಬಗ್ಗೆ ಪ್ರಸ್ತಾಪವಿದೆಯೋ ಅದನ್ನೆಲ್ಲ ತೆಗೆದುಹಾಕಬೇಕೆಂದು ನಿರ್ಬಂಧಿಸಿದ್ದರು. ದೇವರ ವಿಷಯ ತೆಗೆದುಹಾಕಿಬಿಟ್ಟರೆ ಅದರಲ್ಲಿ ಉಳಿಯುವುದೇನು? ದೇವರೇ ಬಲ್ಲ. ಅಂತೂ ದೇವರಿಂದ ತುಂಬಿ ತುಳುಕಾಡುವ ಶ್ರೀರಾಮಕೃಷ್ಣರು ದೇವರೇ ಬೇಡ ಎನ್ನುವವರ ಹೃದಯವನ್ನು ಗೆದ್ದಿರುವುದು ಆಶ್ಚರ್ಯವೇ ಸರಿ. ಈಗ ಕಮ್ಯೂನಿಸ್ಟ್ ಆಳ್ವಿಕೆ ಬಿದ್ದುಹೋದ ನಂತರ ರಷ್ಯಾದಲ್ಲಿ ಧಾರ್ಮಿಕ ಚಟುವಟಿಕೆ ಮುಕ್ತವಾಗಿ ನಡೆಯುತ್ತಿದೆ.

ಶ್ರೀರಾಮಕೃಷ್ಣರ ಕೃಪಾದೃಷ್ಟಿ ಯಾರಯಾರ ಮೇಲೋ ಹೇಗೋ ಬಿದ್ದುಬಿಡುತ್ತದೆ. ತಮ್ಮ ಭಕ್ತರನ್ನು ಆರಿಸಿಕೊಳ್ಳುವ ವಿಧಾನ ಅವರಿಗೇ ಗೊತ್ತು, ನಮ್ಮಿಂದ ಅದನ್ನು ಅರ್ಥಮಾಡಿಕೊಳ್ಳಲು ಆಗುವುದಿಲ್ಲ. ಮಾನವಬುದ್ಧಿಗೆ ನಿಲುಕದ ಎಷ್ಟೋ ಕಾರ್ಯಕಾರಣ ನಿಯಮಗಳು ಕೆಲಸಮಾಡುತ್ತಿರುತ್ತವೆ. ನಮ್ಮ ಒಳಗಣ್ಣಿಗೂ ಕಾಣದ ಎಷ್ಟೋ ಸೂಕ್ಷ್ಮಾತಿಸೂಕ್ಷ್ಮ ವಿಷಯಗಳಿರುತ್ತವೆ. ಅವುಗಳನ್ನು ಅರ್ಥಮಾಡಿಕೊಳ್ಳುವ ಪ್ರಯತ್ನದಲ್ಲಿ



ನಮ್ಮ ಬುದ್ಧಿ ಸೋತು ಶರಣಾಗುತ್ತದೆ; ಹಕ್ಕಿ ಹಾರುವಷ್ಟು ಹಾರಿ ಕೊನೆಗೆ ಹಡಗಿನ ಕಂಬದ ಮೇಲೆ ಸುಮ್ಮನೆ ಕುಳಿತುಕೊಳ್ಳುವಂತೆ. ನಮ್ಮ ಮನಸ್ಸೂ ಹೀಗೆಯೇ ಸುಮ್ಮನಾಗಬೇಕು. ಸುಮ್ಮನೆ ಕುಳಿತು ಶ್ರೀರಾಮಕೃಷ್ಣರ ಕಾರ್ಯವನ್ನು ನೋಡಿ ಆನಂದಿಸಬೇಕು.

ನತಾಲಿಯಾ ಟೋಟ್ಸ್ ದೂರದ ರಷ್ಯಾ ದೇಶದ ಮಹಿಳೆ. ಆಕೆಗೆ ಶ್ರೀರಾಮಕೃಷ್ಣರ ವಿಷಯವೇ ತಿಳಿಯದು. ಭಾರತೀಯ ಧರ್ಮ ದರ್ಶನಗಳ ಬಗ್ಗೆಯೂ ಬಹುಶಃ ಅಷ್ಟು ತಿಳಿದಿರಲಿಕ್ಕಿಲ್ಲ. ಆಕೆ ಟಾಸ್ ನ್ಯೂಸ್ ಏಜೆನ್ಸಿಯ ವರದಿಗಾರ್ತಿಯಾಗಿದ್ದಳು. ಅಪರಾಧ ಮತ್ತು ಶಿಕ್ಷೆಗಳ ವರದಿಗಳಲ್ಲೇ ಆಕೆ ಮುಳುಗಿಹೋಗಿದ್ದಳು. ಒಂದು ದಿನ ಎಲೀನಾ ಮತ್ತು ನಿಕೋಲಾಯ್ ರೋರಿಚ್ ಅವರ ಪತ್ರಗಳು ಆಕೆಗೆ ದೊರೆತವು. ಅವುಗಳಲ್ಲಿ ಶ್ರೀರಾಮಕೃಷ್ಣರ ಬಗ್ಗೆ ಪ್ರಸ್ತಾಪವಿತ್ತು. ಅದನ್ನು ಓದಿದಾಗ ನತಾಲಿಯಾಳ ಮನಸ್ಸು ಬದಲಾಯಿತು. ಅನೇಕರು ಅನೇಕ ಕಡೆಗಳಲ್ಲಿ ಶ್ರೀರಾಮಕೃಷ್ಣರ ಬಗ್ಗೆ ಓದಿರುತ್ತಾರೆ, ಕೇಳಿರುತ್ತಾರೆ. ಅವರೆಲ್ಲರಲ್ಲೂ ಈ ಬದಲಾವಣೆ ಯಾಕಾಗುವುದಿಲ್ಲ? ಇದು ಶ್ರೀರಾಮಕೃಷ್ಣರಿಗೇ ಗೊತ್ತು.

೧೯೩೦ರಲ್ಲಿ ನತಾಲಿಯಾ ತನ್ನ ಕೆಲಸವನ್ನು ತ್ಯಜಿಸಿ ಶ್ರೀರಾಮಕೃಷ್ಣರ ತತ್ತ್ವವನ್ನು ಆಳವಾಗಿ ತಿಳಿದುಕೊಳ್ಳುವ ಪ್ರಯತ್ನದಲ್ಲಿ ತೊಡಗಿದಳು. ಇದರ ಪರಿಣಾಮವಾಗಿ ಹೊರಬಂದ ಪುಸ್ತಕವೇ *The Teachings of Ramakrishna*. ಇದು ಕಥಾಮೃತದ (ವಚನವೇದ)ದ ಅನುವಾದವಲ್ಲ – ಶ್ರೀರಾಮಕೃಷ್ಣರ ಉಪದೇಶದ ಸಾರಸಂಗ್ರಹ. ಅದರಲ್ಲಿ ಶ್ರೀರಾಮಕೃಷ್ಣರ ಜೀವನಚರಿತ್ರೆಯನ್ನೂ ಸೇರಿಸಲಾಗಿದೆ. ನಿಕೊಲಾಯ್ ರೋರಿಚ್, ಬಿ. ರಿಬಕೊವ್ ಮುಂತಾದ ಪ್ರಸಿದ್ಧ ಪೌರಸ್ತ್ಯ ತಜ್ಞರ ಶ್ರೀರಾಮಕೃಷ್ಣರ ಕುರಿತಾದ ಲೇಖನಗಳನ್ನೂ ಅದು ಒಳಗೊಂಡಿದೆ. ನತಾಲಿಯಾ ಹೇಳುತ್ತಾಳೆ: **ಜತೋ ಮತ್ ತತೋ ಪಥ್** (*ಎಷ್ಟು ಮತಗಳೋ ಅಷ್ಟು ಪಥಗಳು*)ಎಂಬ ಹೇಳಿಕೆಯ ಹಿಂದಿರುವ ತಾತ್ತ್ವಿಕ ಸಂದೇಶಕ್ಕೆ ನಾನು ಸಂಪೂರ್ಣ ಮಣಿದಿರುವೆನು. ಧರ್ಮಗಳಿಂದ ವಿಚ್ಛಿದ್ರವಾದ ಈ ಜಗತ್ತಿಗೆ ಇದೊಂದೇ ಶಾಂತಿಯನ್ನು ತರುವಂತಹದು.

ಮೇಲೆ ಸೂಚಿಸಿದ ಪುಸ್ತಕವು, ೧೯೯೩ರಲ್ಲಿ ಪ್ರಕಟವಾದ ಕೆಲವೇ ತಿಂಗಳುಗಳಲ್ಲಿ ಪುಸ್ತಕಗಳ ಮಾರಾಟದ ಮೇಲ್ಪಂಕ್ತಿಯಲ್ಲಿ ಕಾಣಿಸಿಕೊಂಡಿತು. ಪ್ರಕಟವಾದ ೧೦,೦೦೦ ಪ್ರತಿಗಳೂ ಬಹು ಬೇಗನೆ ಮಾರಾಟವಾದವಂತೆ. ಲೈಬ್ರರಿ ಆಫ್ ಫಾರಿನ್ ಲ್ಯಾಂಗ್ವೇಜಸ್ ಮೂಲಕ ಮಾಸ್ಕೋದ ಎಲ್ಲ ಗ್ರಂಥಾಲಯಗಳಿಗೂ ಒಂದೊಂದು ಪ್ರತಿಯನ್ನು ಕಳಿಸಲಾಯಿತು. ವಿಶೇಷವಾಗಿ ಮಾಸ್ಕೋದಲ್ಲಿ ಈ ಪುಸ್ತಕ ಹೆಚ್ಚು ಜನಪ್ರಿಯವಾಗಿದೆ. ಹಿಂದೆ ಪ್ರಕಟವಾದ ಶ್ರೀರಾಮಕೃಷ್ಣರ ಬಗೆಗಿನ ಗ್ರಂಥಗಳೆಲ್ಲವೂ ದೀರ್ಘ ತಾತ್ತ್ವಿಕ ಪ್ರಬಂಧಗಳಂತಿದ್ದವು. ಅದರೆ ಇದು ಜನಸಾಮಾನ್ಯರೂ ಅರ್ಥಮಾಡಿಕೊಳ್ಳುವ ಶೈಲಿಯಲ್ಲಿರುವುದರಿಂದ ಸ್ವಾಭಾವಿಕವಾಗಿಯೇ ಜನರು ಇದನ್ನು ಹೆಚ್ಚು ಆದರದಿಂದ ಸ್ವೀಕರಿಸಿದರು.

ಶ್ರೀರಾಮಕೃಷ್ಣರ ಬಗ್ಗೆ ಹೆಚ್ಚು ತಿಳಿದುಕೊಳ್ಳಬೇಕು ಎಂಬ ಉತ್ಸುಕತೆಯಿಂದ ಅನೇಕರು ನತಾಲಿಯಾಳಿಗೆ ಪತ್ರ ಬರೆಯುತ್ತಾರಂತೆ. ಕೆಲವರು ರಾಮಕೃಷ್ಣರನ್ನು ಕೃಷ್ಣನೆಂದು ತಪ್ಪಾಗಿ ತಿಳಿದುಕೊಂಡಿದ್ದಾರಂತೆ.

ಅಂತೂ ಶ್ರೀರಾಮಕೃಷ್ಣರ ಲೀಲಾಪ್ರಸಂಗ ಇನ್ನೂ ನಡೆಯುತ್ತಿದೆ. ಮುಂದೆಯೂ ನಡೆಯಲಿದೆ. ಆದರೆ ಈ ಲೀಲಾಪ್ರಸಂಗ ತೆರೆಮರೆಯಲ್ಲಿಯೇ ನಡೆಯುತ್ತದೆ. ಶ್ರೀರಾಮಕೃಷ್ಣರಿಗೆ ಸದ್ದುಗದ್ದಲ ಇಷ್ಟವಿಲ್ಲ, ಪ್ರಚಾರಪ್ರಿಯರಲ್ಲ ಅವರು. ಶ್ರೀರಾಮಕೃಷ್ಣರ ಪ್ರಭಾವ ವಾಹಿನಿಯು ಮೌನವಾಗಿ, ಆದರೂ ಶಕ್ತಿಶಾಲಿಯಾಗಿ, ಅಗೋಚರವಾಗಿ, ಆದರೆ ಸೂಕ್ಷ್ಮ ಮನಸ್ಸಿಗೆ ವೇದ್ಯವಾಗಿ, ಎಲ್ಲ ಅಡೆತಡೆಗಳನ್ನೂ ಮೀರಿ, ನಿಧಾನವಾಗಿ, ಯಾವ ಆತುರವೂ ಇಲ್ಲದೆ ಹರಿಯುತ್ತಿದೆ.

(ಆಧಾರ: Journey of the Upanishads to the West)

## ಸ್ವಾಮಿ ವಿವೇಕಾನಂದರು ಮತ್ತು ಯುನೆಸ್ಕೋ (UNESCO)

ಸ್ವಾಮಿ ವಿವೇಕಾನಂದರು ಮಾನವಕೋಟಿಯ ಶ್ರೇಯಸ್ಸಿಗಾಗಿ ನೀಡಿದ ಸಂದೇಶವು ಯುನೆಸ್ಕೋದ ಸಂವಿಧಾನದಲ್ಲಿ ಪ್ರತಿಧ್ವನಿಸೊಂಡಿದ್ದು ಪ್ರಪಂಚದಾದ್ಯಂತ ಹಬ್ಬಿರುವ ಅದರ ಚಟುವಟಿಕೆಗಳಿಗೆ ತಳಹದಿಯಾಗಿದೆ. ಯುನೆಸ್ಕೋದ ಪ್ರಧಾನ ನಿರ್ದೇಶಕರಾದ ಡಾ.. ಫೆಡಿರಿಕಾ ಮೇಯರ್ (Fedirica Mayor) ಅವರು ಜಗತ್ತಿನ ಸಮಸ್ಯೆಯ ಬಗ್ಗೆ ಸ್ವಾಮಿ ವಿವೇಕಾನಂದರಿಗಿದ್ದ ಒಳನೋಟವನ್ನು ಹೃತ್ಪೂರ್ವಕವಾಗಿ ಮೆಚ್ಚಿಕೊಂಡಿದ್ದಾರೆ. ತಮ್ಮ ಅಧಿಕಾರಾವಧಿಯಲ್ಲಿ ಡಾ. ಮೇಯರ್ ೧೯೯೩, ಅಕ್ಟೋಬರ್ ೮ರಂದು, ಯುನೆಸ್ಕೋ ಭವನದಲ್ಲಿ ಒಂದು ಭಾರಿ ಸಭೆಯನ್ನು ಏರ್ಪಡಿಸಿದರು. ೧೮೯೩ರಲ್ಲಿ ನಡೆದ ವಿಶ್ವಧರ್ಮ ಸಮ್ಮೇಳನದ ಮತ್ತು ಅದರಲ್ಲಿ ವಿವೇಕಾನಂದರು ಭಾಗವಹಿಸಿದುದರ ಜ್ಞಾಪಕಾರ್ಥವಾಗಿ ಈ ಸಭೆಯನ್ನು ಏರ್ಪಡಿಸಲಾಗಿತ್ತು. ತಮ್ಮ ಉದ್ಘಾಟನಾ ಭಾಷಣದಲ್ಲಿ ಡಾ. ಮೇಯರ್ ಅವರು ವಿವೇಕಾನಂದರ ವಿಶ್ವಸಂದೇಶದ ಮಹತ್ವವನ್ನು ಎತ್ತಿ ಹೇಳಿದರು. ವಿವೇಕಾನಂದರ ಸಂದೇಶದ ಮೂರು ಅಂಶಗಳಿಂದ ಆಕರ್ಷಿತರಾಗಿ ತಾವು ಆ ಸಭೆಯಲ್ಲಿ ಭಾಗವಹಿಸುತ್ತಿರುವುದಾಗಿ ಅವರು ಹೇಳಿದರು: "ಮೊದಲನೆಯದಾಗಿ ಅವರ ಸಾರ್ವತ್ರಿಕ ದೃಷ್ಟಿ (Universalism) ಮತ್ತು ಸಹಿಷ್ಣುತಾಭಾವ; ಎರಡನೆಯದಾಗಿ ಬಡವರು ಮತ್ತು ಶೋಷಿತರ ವಿಷಯದಲ್ಲಿ ಅವರಿಗಿದ್ದ ಕಳಕಳಿ; ಮೂರನೆಯದಾಗಿ ಶಿಕ್ಷಣ, ವಿಜ್ಞಾನ ಮತ್ತು ಸಂಸ್ಕೃತಿ ಇವುಗಳ ಮೂಲಕವೇ ಮಾನವನ ಬೆಳವಣಿಗೆಯಾಗಬೇಕೆಂಬ ಅವರ ದೃಢವಾದ ನಿಲುವು."

ಯುನೆಸ್ಕೋ ಸಂವಿಧಾನವು ವಿವೇಕಾನಂದರ ಸಂದೇಶವನ್ನು ಪ್ರತಿಧ್ವನಿಸುವುದು ಮಾತ್ರವಲ್ಲದೆ, ರಾಮಕೃಷ್ಣ ಮಹಾಸಂಘದ ಶಿಕ್ಷಣ, ವಿಜ್ಞಾನ ಮತ್ತು ಸಂಸ್ಕೃತಿಯನ್ನು ಕುರಿತಾದ ಧ್ಯೇಯೋದ್ದೇಶಗಳನ್ನು ಪ್ರತಿಬಿಂಬಿಸುತ್ತದೆ ಎಂದು ಮೇಯರ್ ಸೂಚಿಸಿದರು.

(ಸಂಗ್ರಹ: ಸ್ವಾಮಿ ತಥಾಗತಾನಂದರ *Journey of the Upanishads to the West* ಗ್ರಂಥದಿಂದ)